ಶ್ರೀ ಎಂ. ಶಿವಣ್ಣ.—ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಶಿವಣ್ಣನವರೇ, ನಿಮಗೆ ಸ್ವಲ್ಪ ಅವಕಾಶ ಕೊಟ್ಟರೆ, ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಸಚಿವರು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ, ನಿಮಗೆ ಇನ್ನೂ ಸಮಾಧಾನ ಇಲ್ಲವೇ ? ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಂ. ಶಿವಣ್ಣ.—ಮದ್ಯಾಸ್ ಪ್ರಾಂತ್ಯಕ್ಕೆ ಪರವಾನಗಿಯನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಚಾಮರಾಜನಗರ ತಾಲ್ಲೂಕಿನ ಕೆಲವು ಹಳ್ಳಿಗಳಿಗೂ ಲೈಸೆನ್ಸ್ ಕೊಟ್ಟಿದ್ದಾರೆ, ಶಿವಪುರ, ಉತ್ತಿನಹಳ್ಳಿ, ಬಸವಾಪುರ, ಕೊತ್ತಲವಾಡಿ ಪುತ್ತೂರು, ಕೆಂಪಾಪುರ, ಮತ್ತು ಜ್ಯೋತಿಗೌಡನಪುರ ಮುಂತಾದ ಹಳ್ಳಿಗಳಲ್ಲಿ ಕೊಟ್ಟಿದ್ದಾರೆ, ಇವೆಲ್ಲಾ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಹಳ್ಳಿಗಳು. ಮದ್ರಾಸ್ ಪ್ರಾಂತ್ಯಕ್ಕೆ ಸೇರಿಲ್ಲ. ಇವುಗಳ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಸಮಗ್ರವಾದ ತನಿಖೆ ಮಾಡಿಸುತ್ತೇನೆ, ತಪ್ಪಿ ತಸ್ಥರ ಮೇಲೆ ಕ್ರಮಕೈಗೊಳ್ಳುತ್ತೇನೆ. ಮುಂದೆ ವಿವಿಧ ಇಲಾಖೆಯವರು ಪರವಾನಗಿಯನ್ನು ಕೊಡುವುದನ್ನು ನಿಲ್ಲಿಸಿ, ಒಂದೇ ಇಲಾಖೆಯವರು ಕೊಡುವಂಥ ವ್ಯವಸ್ಥೆ ಮಾಡಲಾಗುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ. - ಚಾಮರಾಜನಗರ ತಾಲ್ಲೂಕಿನಲ್ಲಿ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಒಂದೇ ಡಿಪಾರ್ಟ್‌ಮೆಂಟ್ ಮುಖಾಂತರ ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ. ಇಲ್ಲಿ ಇಷ್ಟೆಲ್ಲಾ ಆಗಬೇಕಾದರೆ, ಅವರು ಬರಬೇಕು. ಮಂತ್ರಿಗಳ ಹತ್ತಿರ ವಶೀಲಿಬಾಜಿ ಮಾಡಬೇಕು, ಆನಂತರ ಇವರು ಕೊಡಿ ಎಂದು ಹೇಳಿದ ಮೇಲೆ ಅವರು ಕೊಡಬೇಕು. ಇವತ್ತು ಸುಮ್ಮನೇ ವಿಚಾರಿಸುತ್ತೇನೆ, ಕ್ರಮ ತೆಗೆದುಕೊಳ್ಳುತ್ತೇನೆ. ಎಂದು ಹೇಳಿದರೆ ಏನು ಪ್ರಯೋಜನ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೆ ಹೇಳ ಬೇಕೆಂದರೆ ಇದರಲ್ಲಿ ಯಾವ ವರ್ಚಸ್ಸಿನಿಂದಲೂ ಸಹ ಅನುಮತಿ ಕೊಟ್ಟಿಲ್ಲ. ಹಿಂದೆ ಕೊಟ್ಟಂಥವು ಗಳನ್ನು ನಾವು ನಿಲ್ಲಿಸಿದ್ದೇವೆ. ಆದನ್ನು ಮುಂದುವರಿಸುತ್ತಿಲ್ಲ. ಜಿಲ್ಲಾಧಿಕಾರಿಗಳು ಮತ್ತು ಅಸಿಸ್ಟೆಂಟ್ ಕಮಿಷನರ್‌ರವರು ಇದನ್ನು ನಿಲ್ಲಿಸಿದ್ದಾರೆ. ಅವರಿಗೆ ಆದೇಶ ಕೊಟ್ಟಿದ್ದೇವೆ. ಈ ರೀತಿ ಆಗಬಾರದು. ಹಿಂದಿನವರ ಬಗ್ಗೆ ವಿಚಾರಣೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಯಾರಿಗೆ ಹಿಂದೆ ಪರವಾನಗಿ ಕೊಟ್ಟಿದ್ದರು ಅವರನ್ನು ನಿಲ್ಲಿಸುವುದಕ್ಕೆ ಆಗಿಲ್ಲ. ಅಕ್ರಮವಾಗಿ ಯಾರು ಯಾರು ಮಾಡಿದ್ದಾರೆ ಅವರನ್ನೆಲ್ಲಾ ನಿಲ್ಲಿಸಿದ್ದೇವೆ. ಆದನ್ನೆಲ್ಲಾ ಸೀಜ್ ಮಾಡಿದ್ದೇವೆ, ನಮ್ಮ ವಿರಿಯಾದಲ್ಲಿ ನಡೆಯುತ್ತಿದೆ ಎಂದು ಹೇಳಿದರಲ್ಲಾ ಅದಕ್ಕೆ ಹಿಂದಿನ ಸರಕಾರದವರು ಪರವಾನಗಿ ಕೊಟ್ಟಿದ್ದಾರೆ. ಬೆಂಗಳೂರಿನವರಿಗೆ, ಮೈಸೂರಿನವರಿಗೆ, ಆಂಧ್ರದವರಿಗೆ, ತಮಿಳಿನವರಿಗೆಲ್ಲಾ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಅವರೂ ನಮ್ಮ ಸರಕಾರದಲ್ಲಿದ್ದರು, ನಮ್ಮ ಪಕ್ಷದಲ್ಲಿದ್ದರು. ಮಂತ್ರಿಗಳಾಗಿದ್ದರು.

ಅಧ್ಯಕ್ಷರು.—ಅಡ್ಯಂತಾಯ ಅವರೇ, ಏತಕ್ಕೆ ನೀವು ಇಷ್ಟು ಜೋರಾಗಿ ಮಾತನಾಡುತ್ತಿದ್ದೀರಿ.

(3) ಕೊಡಗಿನ ಮಿಾಸಲು ಅರಣ್ಯದಲ್ಲಿ ಗುತ್ತಿಗೆದಾರರಿಂದ ಅರಣ್ಯ ಸಂಪತ್ತು ನಾಶವಾಗುತ್ತಿರುವುದು

ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಕೊಡಗಿನ ಮಿಾಸಲು ಅರಣ್ಯದಲ್ಲಿ ಗುತ್ತಿಗೆದಾರರಿಂದ ಅರಣ್ಯ ಸಂಪತ್ತು ನಾಶವಾಗುತ್ತಿರುವ ಬಗ್ಗೆ, ಅರಣ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ತಮ್ಮ ಅನುಮತಿಯನ್ನು ಪಡೆದು ಈ ಕೆಳಗಿನ ಹೇಳಿಕೆಯನ್ನು ನೀಡುತ್ತೇನೆ.

೧೯೮೩ ರಿಂದ ೧೯೮೬ರ ವರೆಗೆ ಮಡಿಕೇರಿ ಅರಣ್ಯ ವಿಭಾಗದಲ್ಲಿ ವಿವಿಧ ಕಾರ್ಖಾನೆಗಳಿಗೆ ಮೆದು ಮರ ಕಡೆದೊಯ್ಯಲು ನೀಡಿರುವ ಗುತ್ತಿಗೆಗಳ ವಿವರಗಳನ್ನು ಲಗತ್ತಿಸಿದೆ.

೧೯೮೩ ರಿಂದ ೧೯೮೬ರ ವರೆಗೆ ನೀಡಿದ ಗುತ್ತಿಗೆಗಳು, ಈ ಹಿಂದೆ ನೀಡಿರುವ ಗುತ್ತಿಗೆಗಳ ಅವಧಿ ವಿಸ್ತರಿಸಿ ನೀಡಲಾಗಿದೆ (ಮೆ. ಪೆರ್ಮಾಲಿ ವ್ಯಾಲೇಸ್ ಲಿಮಿಟೆಡ್, ಸೆಟ್ಟಿನ ಹೊರಪಡಿಸಿ) ಮೆ. ವೆಸ್ಟ್ರನ್ ಇಂಡಿಯಾ ಪ್ಲೈವುಡ್, ಬೆಲಿಯಪಟಂ ಇವರಿಗೆ ನೀಡಿರುವ ಗುತ್ತಿಗೆಯ ಅವಧಿ ವಿಸ್ತರಿಸಿದ್ದು, ಮರಗಳನ್ನು ಮಂಗಳೂರು ಸಮೀಪದ ಉಲ್ಲಾಳದಲ್ಲಿಯ ತಮ್ಮ ಕಾರ್ಖಾನೆಯಲ್ಲೇ ಉಪಯೋಗಿಸಬೇಕೆಂದು ಸರ್ಕಾರ ಶರತ್ತು ಹಾಕಿದೆ.

ಎಲ್ಲಾ ಗುತ್ತಿಗೆಗಳು ಗರಿಷ್ಠ ೫ ವರ್ಷಗಳ ಅವಧಿಯಾಗಿರುತ್ತದೆ. ಹಾಲಿ ಇರುವ ಗುತ್ತಿಗೆಯ ಅವಧಿ ಮುಗಿದ ನಂತರ, ಸದರೀ ಅವಧಿಗಳು ವಿಸ್ತರಿಸಲಾಗುವುದೆಂದು ಸರ್ಕಾರದಿಂದ ಯಾವುದೇ ಆಶ್ವಾಸನೆ ಕೊಟ್ಟಿರುವುದಿಲ್ಲ.

ಈ ಸಂದರ್ಭದಲ್ಲಿ ಒಂದು ವಿಷಯ ಸ್ಪಷ್ಟಪಡಿಸಬೇಕಾಗಿದೆ. ಯಾವುದೇ ಅರಣ್ಯ ಪ್ರದೇಶದಲ್ಲಿ ಕಾರ್ಖಾನೆಗಳಿಗೋಸ್ಕರ ಕಾಮಗಾರಿ ನಡೆಸುತ್ತಿಲ್ಲ. ಸಾಧಾರಣವಾಗಿ ಈ ಅರಣ್ಯ ಪ್ರದೇಶದಲ್ಲಿ ಪರಿಪಕ್ವಕ್ಕೆ ಬಂದಿರುವ ಮರಗಳನ್ನು ಕಡೆಯುವ ಪದ್ಧತಿ ಸುಮಾರು ೧೦೦ ವರ್ಷಗಳಿಂದ ನಡೆಯುತ್ತಾ ಬಂದಿದೆ. ಕಾರ್ಖಾನೆಗಳು ಪಡೆಯುತ್ತಿರುವ ಮರದ ಪ್ರಮಾಣ ವಾರ್ಷಿಕವಾಗಿ ಲಭ್ಯವಾಗುವ ಮರದ ಪ್ರಮಾಣಕ್ಕಿಂತ ಕಡಿಮೆ. ಅರಣ್ಯ ಪ್ರದೇಶದಿಂದ ಕಡಿದ ಮರಗಳಿಂದ, ಪ್ಲೈವುಡ್ ಕಾರ್ಖಾನೆಗಳಿಗೆ ಉಪಯೋಗವಾಗುವ ಮರಗಳು ಪ್ಲೈವುಡ್ ಕಾರ್ಖಾನೆಗಳಿಗೆ, ಮ್ಯಾಚ್‌ವುಡ್ ಕಾರ್ಖಾನೆಗಳಿಗೆ ಉಪಯೋಗವಾಗುವ ಮರಗಳು ಮ್ಯಾಚ್‌ವುಡ್ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಗಟ್ಟಿ ಜಾತಿಯ ಮರಗಳು ಮತ್ತು ಸೌದೆ ಸರ್ಕಾರಿ ನಾಟಾ ಡಿಪೋಕ್ಕೆ ಸಾಗಿಸಲಾಗುವುದು.

೧೯೮೬-೮೭ನೇ ಕಾಮಗಾರಿ ವರ್ಷದಲ್ಲಿ ಮಡಿಕೇರಿ ಅರಣ್ಯ ವಿಭಾಗದಲ್ಲಿ ಸುಮಾರು ೬೩೬ ಎಕರೆ ಪ್ರದೇಶದಲ್ಲಿಯಂ ೯ ತೋಪುಗಳಲ್ಲಿ ಒಟ್ಟಾರೆ ೯೩೧ ಮರಗಳನ್ನು ಕಾರ್ಖಾನೆಯವರು ಕಡಿತಲೆ ಮಾಡಲು ಗುರುತು ಮಾಡಲಾಗಿದೆ. ಆದರೆ, ದಿನಾಂಕ ೭-೨-೧೯೮೭ರಿಂದ ಮುಂದಿನ ಆದೇಶ ನೀಡುವ ವರೆಗೆ ಈ ಮರಗಳ ಕಡಿತಲೆ ನಿಲ್ಲಿಸಲಾಗಿದೆ.

STATEMENT SHOWING THE DETAILS OF LONG TERM LEASES MADE TO VARIOUS INDUSTRIES IN MADIKERI FOREST DIVISION FOR EXTRACTION OF TIMBER DURING THE PERIOD FROM 1983 TO 1986.

Sl.No.	Name of the Industries	Areas Allotted
1	2	3
1	M/s. Mafatlal Plywood Industries Limited, Bangalore.	Madikeri Forest Division, Pushpagiri felling series to be worked on 55;50 basis by the company and the Indian Plywood Manufacturing Company Ltd.
2	M/s.Kanara Wood and Plywood Industries (Pvt) Limited, Mangalore	S.No. 9/9 Kumarahalli, Somwarpet taluk of Madikeri Division. The balance area in Karike-6-A Block Madikeri Division. Uncommitted areas of Padinalked in Madikeri Division. Annual coupe of 56 acres including 1100 Acres of Cardamom area. Pulki and Kurata blocks coming under Padinalkada uncommitted areas, Block No.13 of Pulki Block inPalinalkanda Reserve Forest.
3	M/s. Purushotham Gokuldas Plywoods, Mangalore.	Forest areas ofKadamkal Reserve Forest (in-accessible area) in Madikeri Forest Division.
4	M/s. Western India Plywood, Beliapatnam (Kerala).	Pullingoth and Manjamotta felling series of Madikeri Forest Division.
5	M/s. Hunsur Plywood Works (Pvt) Limited, Hunsur.	Sirkal felling series of Kadamk block-2.

Extent	Quantity allotted per annum.	Date of agree-ment.	Date of Expiry	Remarks
4	5	6	7	8
1.38 Sq. miles	500m³	22.1,1987	28.9.1991	1) G. O. No. FFD 118 FDP 86 Dt 22.12.86 2) This is renewal of earlier concession granted in 1966.
310.83 Acres	4000m³	13.12.1984	12.12.1989	1) G. O. No. FFD 50 FDP 84 Dt. 1.12.84.
2662 Acres				2) This is renewal of earlier concession granted in 1978.
4,102 Acres	1600m³	-do-	-do-	
–	2000m³	13.12.1984	12.12.1989	1) G. O. No. FFD. 136 FDP. 84 Dt. 1.12.84. 2) This is renewal of earlier concession granted in 1979.
6.24Sq. Miles	2857m³	15.10.1986	28.8.1991	1) G. O. No. FFD 150 FDP 85 Dt. 4.7.86. 2) This is renewal of earlier concession granted in 1966.
3870 Acres	2000m³	18.12.1984	17.12.1989	1) G. O. No. FFD 207 FDP 81 Dt. 1.12.84. 2) This is renewal of earlier concession geanted in 1979.

1	2	3
		Kitty Reserve Forest in Makut Range in Madikeri Forest Division.
6	M/s. Sree Karnataka Veneering Industries, Mysore	Uncommitted areas in the following blocks. 1. Pushpagiri Malai 2. Marigundi Malai 3. Botlugallu Malai 4. Lingetha Malai
7	M/s. Indian Wood and Wood Products, Mangalore.	Udumbe block 15 in Makut Range of Madikeri Forest Division, which is purely under cardamom cultivation in lieu of the areas concerned in G.O.dated 27-12-1978 and as incorporated in Original agreement dated 23-5-1979.
8	M/s. Karnataka Plywoods. Sullia.	Marenad Felling series of Mudikeri Forest Division already conceded and un-committed forest areas in Mandagunnar block of Padikanda Range Forest and Pulligoth-Bhagatchal blocks of Madikeri Forest Division. Baikabbe block-12 attached forest in Angarkolli of Mundrote Range of Madikeri Forest Division.
9	M/s. Veneer Mills, Mysore	Mathre felling series (Makut Range)and Koynad felling series of Makut Range in Madikeri Forest Division. Sl.No. 1/1 Paisary Land Arekal village Sampaje Range, Madikeri Division, Revenue areas in Manjarabad Range transferred to Forest Department. Sl.No. 1/1 Prisary Land Arekal village Sampaje Range, Madikeri Division, Revenue areas in Manjarabad Range transferred to Forest Department. Un-committed forest areas in Mandagannur block Padikanda Reserve Forest and Pulligoth-Bhagtchal blocks of Madikeri Forest Division.

4	5	6	7	8
1300 Acress	2715m³	18.12.1984	17.12.1989	1) G.O. No. FFD. 207 FDP 81 Dt. 1.12.84 2) This is renewal of earlier concession granted in 1975.
2450 Acress	2000m³	18.12.1984	17.12.1989	1) G. O. No. FFD 176 FDP 83 Dt. 1.12.84 2) This is renewal of earlier concession granted in 1978.
1,918 Acres	2000m³	13.12.1984	12.12.1989	1) G. O. No. FFD 106 FDP 83 dt. 1.12.84
–	2000m³	19.12.1984	18.12.1989	1) G. O. No. FFD 31 FDP 81 dt. 1.12.84. 2) This is renewal of earlier allotment made in 1978–79.
–	2000m³	19.12.1984	18.12.1989	–do–
–	3380m³	18.12.1984	17.12.1989	1) G.O. No, FFD 210 FDP 83 dt. 1 12.84. 2) This is renewal of earlier allotment made in 1979.
–	1000m³	18,12.1984	17.12.1989	1) G. O. No. FFD 210 FDP 83 dt. 1.12.84. 2) This is renewal of earlier allotment made in 1978–79.

1	2	3	
10	M/s. Parmali Wallace Limited, Nettana	Name of the village	Name of the Malai
		1. Parakattagiri	– Belanjikad
		2. Theralu	– Beleicolly.
11	M/s. Mysore Shipboards Limited, Mysore	Kirthy Reserve Forest in Makut Range in Madikeri Forest Division.	

1) Balance area in Baikabbe Block-1[2] in Padinalkad Reserve Forest after demarcation to earlier allottees.

2) (a) Palamalethora Kaimathudu part of Koynad felling series under selection working area transferred from Cardamom malai.

(b) Appachotti malai, part of serikal felling series under selection working area transferred from cardamom malai.

(c) Mapira Malai-part of Serikal felling series under selection working area transferred from Cardamom malai.

(d) Thoratti malai part of serikal felling series under selection working area transferred from cardamom malai.

3) Kaloor Paisary land transferred from Revenne Department.

4	5	6	7
200 2500m³ Acres 655 Acres	27.2.1985	26.2.1987	1) G. O. No. FFD 61 FDP 82 dt. 21.2.85.
1412 2948m³ Acres	18.12.1974	17.12.1989	1) G.O. No. FFD 20 FDP 81 dt. 1.12.84. 2) This is renewal of earlier allotment made in 1979.
1000 2000m³ Acres	18.12.1984	17 12.1989	1) G. O. No. FFD 207 FDP 81 dt. 1.12.84. 2) This is renewal of earlier allotment made in 1979.
350 ,,			
270 ,,			
150 ,,			
160 ,,			
7820 ,,			

ಶ್ರೀಮತಿ ಸುಮಾ ವಸಂತ್.—ಮಾನ್ಯ ಅಧ್ಯಕ್ಷರೇ, ಈಗ ಜಿಲ್ಲಾ ಅಭಿವೃದ್ಧಿಗೆ ಬರುವ ಅರ್ಧ ದಷ್ಟು ಹಣವನ್ನು ಫಾರೆಸ್ಟ್ ಬೆಳೆಸುವುದಕ್ಕೆ ಹಾಕಬೇಕೆಂದು ಹೇಳುತ್ತಿದ್ದಾರೆ ಅರಣ್ಯ ಸಂಪತ್ತಿನ ನಾಶದಲ್ಲಿ ಬಹಳ ದೊಡ್ಡ ಜಾಲ ಅಡಗಿದೆ ಎಂದು ನನ್ನ ಅನಿಸಿಕೆ. ಐದು ವರ್ಷದವರೆಗೆ ಗುತ್ತಿಗೆಯನ್ನು ನವೀಕರಣ ಮಾಡಿದ್ದು ಯಾವ ಕಾರಣಕ್ಕೋಸ್ಕರ ಎಂದು ಕೇಳುತ್ತಿದ್ದೇನೆ. ಉಡುಂಬೆ ಒಂದು ಅರಣ್ಯ ಪ್ರದೇಶ, ಹಾಗೆಯೇ ಭಾಗಮಂಡಲ, ಕರ್ಕೆ ಮುಂತಾದ ಕಡೆಗಳಲ್ಲಿ ಮರ ಕಡಿಯುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಇತ್ತೀಚೆಗೆ ಕೊಡಗಿನಲ್ಲಿ ಯಾವುದೇ ಫ್ಯಾಕ್ಟರಿಗೆ ಮರ ಕಡಿಯುವುದಕ್ಕೆ ಅನುಮತಿ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ಮರಗಳೇ ಇಲ್ಲ. ಮುಂದಿನ ನಲವತ್ತು ವರ್ಷಗಳಲ್ಲಿ ಕಡಿಯಲು ಬಹುದಾದಷ್ಟು ಮರಗಳನ್ನು ಈಗಲೇ ಕಡಿದು ಮುಗಿಸಿದ್ದಾರೆ. ಈಗಾಗಲೇ ಶೇಕಡಾ ೮೦ ರಷ್ಟು ಅರಣ್ಯ ಪ್ರದೇಶವನ್ನು ಕಡಿದು ಮುಗಿಸಿದ್ದಾರೆ. ಇನ್ನು ಕೇವಲ ಶೇಕಡಾ ೨೦ ರಷ್ಟು ಅರಣ್ಯ ಪ್ರದೇಶ, ಮಾತ್ರ ಉಳಿದಿದೆ. ಸರಕಾರ ಈಗ ಕೂಡಲೇ ಕೊಡಗಿನ ಅರಣ್ಯ ಪ್ರದೇಶದಲ್ಲಿ ಯಾವುದೇ ಮರವನ್ನು ಕಡಿಯಲು ಅನುಮತಿ ಕೊಡಬಾರದು ಹಾಗೂ ಈಗ ಕೊಟ್ಟಿರತಕ್ಕಂಥ ಗುತ್ತಿಗೆಯನ್ನು ಕೂಡಲೇ ರದ್ದು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ೭-೨-೮೭ ರಿಂದ ಮರಗಳನ್ನು ಕಡಿಯಬಾರದೆಂದು ಆದೇಶ ಕೊಟ್ಟಿದ್ದೇವೆ. ಅನೇಕ ಟಿಂಬರ್ ಫ್ಯಾಕ್ಟರಿಗಳು ನಿಂತಿವೆ. ಮಡಿಕೇರಿ ಜಿಲ್ಲೆಯಲ್ಲಿ ಒಟ್ಟು ೯೧ ಟಿಂಬರ್ ಫ್ಯಾಕ್ಟರಿಗಳು ಇವೆ. ಅವರೆಲ್ಲರೂ ಈಗ ಗಲಾಟೆ ಮಾಡುತ್ತಿದ್ದಾರೆ. ನಾವು ಅವರಿಗೆ ಮತ್ತೆ ಪರ್ಮಿಶನ್ ಕೊಡಬೇಕಾದರೆ ಅವರಿಗೆ ಯಾವ ರೀತಿಯಲ್ಲಿ ಅಗ್ರಿಮೆಂಟ್ಸ್ ಹಿಂದೆ ಆಗಿದ್ದವು ಎನ್ನುವುದನ್ನು ನೋಡಿ, ಕ್ಯಾಬಿನೇಟ್‌ನಲ್ಲಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ತದನಂತರ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ತೀರ್ಮಾನ ಮಾಡುತ್ತೇನೆ. ಈಗ ರಿಜರ್ವ್ ಫಾರೆಸ್ಟ್ ಅನ್ನು ಕಡಿಯುವುದಕ್ಕೆ ಅನುಮತಿ ಕೊಟ್ಟಿಲ್ಲ. ಈ ಬಗ್ಗೆ ಏನು ತೀರ್ಮಾನ ಸರ್ಕಾರ ತೆಗೆದುಕೊಳ್ಳುತ್ತದೆಯೋ ಅದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇನ್ನು ಎರಡು ಮೂರು ದಿವಸಗಳಲ್ಲಿಯೇ ತಿಳಿಸಲಾಗುವುದು.

ಶ್ರೀಮತಿ ಸುಮಾವಸಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರಿಜರ್ವ್ ಫಾರೆಸ್ಟ್ ಅನ್ನು ಕಡಿಯುವುದಕ್ಕೆ ಅನುಮತಿ ಕೊಡುವುದಿಲ್ಲವೆಂದು ಹೇಳಿದರು. ಆದರೆ ಆ ಫ್ಯಾಕ್ಟರಿಗಳ ಮಾಲೀಕರು ವಿಧಾನ ಸೌಧದ ಸುತ್ತಲೂ ಬಂದೂ ಸುತ್ತಾಡುತ್ತಿದ್ದಾರೆ. ಈಗ ಅಸೆಂಬ್ಲಿ ನಡೆಯುತ್ತಿದೆ. ಆದ್ದರಿಂದ ನೀವು ಮರಗಳನ್ನು ಕಡಿಯುವುದಕ್ಕೆ ಆದೇಶ ಕೊಟ್ಟಿಲ್ಲ. ಅಸೆಂಬ್ಲಿ ಮುಗಿದ ತಕ್ಷಣ ಮತ್ತೆ ಪರ್ಮಿಶನ್ ಕೊಡುತ್ತೀರಿ. ಆದ್ದರಿಂದ ಸರ್ಕಾರ ಪಶ್ಚಿಮಘಟ್ಟಗಳ ಕಾಡನ್ನು ಕಡಿಯಲಂ ಪರ್ಮಿಶನ್ ಕೊಡುವುದಿಲ್ಲವೆಂದು ಸ್ಪಷ್ಟವಾದ ಭರವಸೆಯನ್ನು ನನಗೆ ಕೊಡಬೇಕು

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ನಾವು ಯಾರಿಗೂ ತಾರತಮ್ಯ ಮಾಡುವುದಿಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ತಾರತಮ್ಯ ಮಾಡುತ್ತೀರೆಂದು ಮಾನ್ಯ ಸದಸ್ಯರೇಯಾರು ಹೇಳಲಿಲ್ಲ. ಫ್ಯಾಕ್ಟರಿಗಳವರು ವಿಧಾನ ಸೌಧದ ಸುತ್ತಲೂ ಸುತ್ತಾಡುತ್ತಿದ್ದಾರೆ. ವಿಧಾನ ಸಭೆಯಲ್ಲಿ ಮುಗಿದ ತಕ್ಷಣ ನೀವು ಅವರಿಗೆ ಮರ ಕಡಿಯಲು ಪರ್ಮಿಶನ್ ಕೊಡುತ್ತೀರೆಂದು ಅವರು ಹೇಳುತ್ತಿದ್ದಾರೆ. ಅದಕ್ಕೆ ಉತ್ತರ ಹೇಳಿ...

ಶ್ರೀ ಜೆ. ಎಸ್. ದೇಶಮುಖ್.—ನಾನು ಈಗಾಗಲೇ ಹೇಳಿದ್ದೇನೆ.

ಹುಬ್ಬಳ್ಳಿಯ ಭೂರೂಕಾ ಟೆಕ್ಸ್‌ಟೈಲ್ಸ್ ಮಿಲ್‌ನ ಕಾರ್ಮಿಕರ ಮೇಲೆ ಭದ್ರತಾ ಪಡೆಯವರು ಗುಂಡುಹಾರಿಸಿರುವುದು

ಶ್ರೀ ಎನ್. ಎಂ. ಜಡ್ಕಂತಾಯ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯ ಭೂರೂಕಾ ಟೆಕ್ಸ್‌ಟೈಲ್ಸ್ ಮಿಲ್‌ನ ಕಾರ್ಮಿಕರ ಮೇಲೆ ಭದ್ರತಾ ಪಡೆಯವರು ಗುಂಡುಹಾರಿಸಿದ ಬಗ್ಗೆ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ.